# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ವಾರ್ಡ್ 07 ಬ್ಯಾಟರಾಯನಪುರ ವಾರ್ಡ್ ಸಮಿತಿ ಸಭೆಯ ನಡವಳಿ.**

**ದಿನಾಂಕ 17.07.2021 ರಂದು ಬೆಳ್ಳಿಗೆ 11.30 ಕ್ಕೆ ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಝೂಮ್ ಅಪ್ ಮೂಲಕ ಸಭೆಯನ್ನು ಹಮ್ಮಿಕೊಳ್ಳಲಾಯಿತು. ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.**

ವಾರ್ಡ್ ನಂ.07, ಬ್ಯಾಟರಾಯನಪುರ ವಾರ್ಡ್‌ಗೆ ಮಾನ್ಯ ಆಯುಕ್ತರ ಆದೇಶದಂತೆ ನೋಡಲ್ ಅಧಿಕಾರಿಯಾಗಿ ನಿಯೋಜಿಸಲಾಗಿರುವ ಶ್ರೀ.ಪ್ರಕಾಶ್.ಜಿ ರವರು ಸಭೆಯಲ್ಲಿ ಹಾಜರಿದ್ದು, ಈ ಹಿಂದಿನ ಸಭೆಯ ನಡುವಳಿಗಳ ಬಗ್ಗೆ ಗಮನ ಹರಿಸಿ, ಕೈಗೊಂಡ ಕ್ರಮದ ಬಗ್ಗೆ ಚರ್ಚಿಸಲಾಯಿತು.

## 1. ಘನತ್ಯಾಜ್ಯ ನಿರ್ವಹಣೆ:

1. ವಾರ್ಡ್ ವ್ಯಾಪ್ತಿಯಲ್ಲಿ ಘಣತ್ಯಾಜ್ಯಾ ನಿರ್ವಹಣೆ ಸಂಪೂರ್ಣ ಹಾಳಾಗಿದ್ದು, ರಸ್ತೆ ಬದಿಯಲ್ಲಿ ಕಸದ ರಾಶಿ ಬಿದ್ದಿರುವ ಬಗ್ಗೆ ಸಾರ್ವಜನಿಕರು ದೂರು ನೀಡಿರುತ್ತಾರೆ.
2. ಆಟೋ ಟಿಪ್ಪರ್ ಗಳನ್ನು ಸರಿಯಾಗಿ ನಿಯೋಜಿಸಿರುವುದಿಲ್ಲ, ಹಾಗೂ ಕಾಂಪ್ಯಾಂಕ್ಟರ್ ವಾಹನಗಳನ್ನು ಸಹಾ ಸರಿಯಾಗಿ ಒದಗಿಸುತ್ತಿರುವುದಿಲ್ಲ ಎಂದು ತಿಳಿಸಿರುತ್ತಾರೆ.
3. ಸದರಿ ವಿಷಯವಾಗಿ ಸೂಕ್ತ ಕ್ರಮ ಕೈಗೊಳ್ಳುವಂತೆ, ವಾರ್ಡ್ ಸಮಿತಿ ಸದಸ್ಯರು, ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಸೂಚಿಸಿರುತ್ತಾರೆ.

## 2. ಆರೋಗ್ಯ ಇಲಾಖೆ:

1. ಕೋವಿಡ್ ನಿಯಂತ್ರಣದ ಬಗ್ಗೆ ಕ್ರಮ ವಹಿಸಲು, ಮಾನ್ಯ ಮುಖ್ಯಆಯುಕ್ತರು, ಬಿಬಿಎಂಪಿ ರವರ ಸೂಚನೆಗಳಂತೆ, ಕೋವಿಡ್ ಪರೀಕ್ಷೆಯನ್ನು ತೀವ್ರಗೊಳಿಸಬೇಕೆಂದು ತಿಳಿಸಲಾಗಿದೆ.
2. ವ್ಯಾಕ್ಸಿನೇಶನ್ ಹಾಕಿಸುವ ಕೆಲಸವನ್ನು ತೀವ್ರಗೊಳಿಸಬೇಕೆಂದು ಮನವಿ ಮಾಡಲಾಯಿತು.

## 3. ಕಾಮಗಾರಿ ವಿಭಾಗ:-

1. ವಾರ್ಡ್ ಮಟ್ಟದಲ್ಲಿ ಯಾವುದೇ ಅನುದಾನಗಳು ಲಭ್ಯಇರದೇ ಇರುವ ಬಗ್ಗೆ ಮಾಹಿತಿ ನೀಡುತ್ತಾ, ಪ್ರಸುತ್ತ ಮಾನ್ಯ ಮುಖ್ಯ ಆಯುಕ್ತರು ಬಿಬಿಎಂಪಿ, ರವರು, ಪ್ರತಿ ವಾರ್ಡ್ ಗೆ ಸ್ಲಿಟ್ ಅಂಡ್ ಟ್ರಾಕ್ಟರ್ ಮತ್ತು ರಸ್ತೆ ಗುಂಡಿಗಳನ್ನು ಮುಚ್ಚಲು ಮಾತ್ರ ಅನುದಾನವನ್ನು ನೀಡಿದ್ದು, ಕೂಡಲೇಇದರ ಬಗ್ಗೆ ಕ್ರಮ ವಹಿಸುವುದಾಗಿ ತಿಳಿಸಲಾಯಿತು.
2. ಪ್ರಸುತ್ತ ಮಳೆಗಾಲದಲ್ಲಿ, ಮಳೆಯ ಪ್ರಮಾಣ ಹೆಚ್ಚಾದಾಗ, ಮಳೆಯಿಂದ ಆಗುಬಹುದಾದ ಅನಾಹುತಗಳನ್ನು ತಪ್ಪಿಸಲು, ಸಾರ್ವಜನಿಕರ ಕೋರಿಕೆಯ ಮೇರೆಗೆ, ಹಾಗೂ ಹಿಂದಿನ ಮಳೆಗಾಲದ ಸಮಯದಲ್ಲಿ ಸಮಸ್ಯೆ ಉಂಟಾದ ಪ್ರದೇಶಗಳಲ್ಲಿ, ಚರಂಡಿಗಳಿಂದ ಹೂಳು ತೆಗೆಯುವ ಕೆಲಸವನ್ನು ಮಾಡಲಾಗುತ್ತಿರುತ್ತದೆ. ಅವಶ್ಯಕತೆವಿರುವ ಸ್ಥಳಗಳಲ್ಲಿ ಹೂಳು ತೆಗೆಯಬೇಕಾದ ಸ್ಥಳಗಳಲ್ಲಿ ಹೂಳು ತೆಗೆಸಲಾಗುವುದು ಎಂದು ತಿಳಿಸಲಾಯಿತು.
3. ಸಿಂಧಿ ಕಾಲೇಜು ಮುಖ್ಯರಸ್ತೆಯಲ್ಲಿ ಹೊಸದಾಗಿ ಹೆಚ್ಚುವರಿಯಾಗಿ ಮಾಡಬೇಕಾದ ಓಳಚರಂಡಿ ಪೈಪ್ ಲೈನ್ ಅಳವಡಿಕೆ ಕಾಮಗಾರಿಯನ್ನು ತ್ವರಿತಗತಿಯಲ್ಲಿ ನಿರ್ವಹಿಸಬೇಕೆಂದು ಮನವಿ ಮಾಡಿದರು.

## 4. ತೋಟಗಾರಿಕೆ ಇಲಾಖೆ:-

1. ವಾರ್ಡ್‌ನಲ್ಲಿರುವ ಉದ್ಯಾನವನಗಳ ನಿರ್ವಹಣೆಗಾಗಿ, ಅನುದಾನದ ಕೊರತೆಯಿದ್ದು, ಈ ಬಾರಿಯ ಅನುದಾನದಲ್ಲಿ, ಮತ್ತಷ್ಟು ಕೆಲಸಗಳನ್ನು ನಿರ್ವಹಿಸುವುದಾಗಿ ತೋಟಗಾರಿಕೆ ಅಧೀಕ್ಷಕರು ತಿಳಿಸಿದರು.

5. ಅರಣ್ಯ ಇಲಾಖೆ:-

1. ಮಳೆಗಾಲದ ಸಮಯವಿರುವುದರಿಂದ, ಅಪಾಯ ಸ್ಥಿಯಲ್ಲಿರುವ ಮರಗಳನ್ನು ಕೂಡಲೇ ಕೊಂಬೆಗಳನ್ನು ಕತ್ತರಿಸುವ ಕೆಲಸವನ್ನು ನಿರ್ವಹಸಿಬೇಕೆಂದು, ಸಾರ್ವಜನಿಕರು ಮನವಿ ಮಾಡಿರುತ್ತಾರೆ.

ಕಾರ್ಯದರ್ಶಿ

ವಾರ್ಡ್ 07